## ಬಂಧುಗಳದಾರಿಗಾರಿದ್ದರೇನು ?

ಬಂಧುಗಳ ದಾರಿಗಾರಿದ್ದರೇನು ಇಷ್ಟ
ಬಂಧು ತ್ರಿಜಗಕೆ ಶ್ರೀಹರಿಯಲ್ಲದೆ ಮಿಕ್ಕ
ಬಂಧುಗಳದಾರಿಗಾರಿದ್ದರೇನು ? । ಪ ।

ನೆಗಳ ಕೈಯಲ್ಲಿ ಮಾತಂಗವು ಸಿಕ್ಕಿ ಒದರಲಾಗಿ
ಆನೆಗಳೇನ ಮಾಡುತಿರ್ದವಡವಿಯಲಿ ।
ನಗಜೆಯಾಳ್ದನ ಬ್ರಹ್ಮೇತಿ ಬಂದು ಕಾಡಲಾಗಿ
ರುದ್ರಾದಿಗಳೇನು ಮಾಡುತಿರ್ದರಾ ಶೈಲದೊಳಗೆ । ೧ ।

ದಿಂಡೆಯು ಮಾರ್ಗದಿ ಮಲತಾಯಿ ಮಗನ ಹೊಡೆಯಲು ।
ಮಂಡಲಪತಿ ಏನ ಮಾಡುತಿರ್ದನು ।
ಮಿಂಡಿ ಪೆಣ್ಣಾನು ಸಭೆಯಲಿ ಸೀರೆ ಸುಲಿಯಲಿ ।
ಗಂಡರೈವರು ನೋಡಿ ಏನ ಮಾಡುತಿರ್ದರಯ್ಯ । ೨ ।

ಮೃಗಚಕ್ರವರ್ತಿ ಬಹುವರನಾಗಿ ಪೋಗುತ್ತಿದೆ
ಮಿಗೆ ಸತಿಸುತರೇನ ಮಾಡುತಿರ್ದೌ ।
ಮೃಗ ಮಾನವಾಕಾರ ಕಾಗಿನೆಲೆಯಾದಿ ಕೇಶವನಲ್ಲದೆ
ಮಿಗು ಬಂಧುಗಳಿದಾರಿಗಾರಿದ್ದರೇನು । ೩ ।

## ಮುಟ್ಟದಿರು ಮುಟ್ಟದಿರು ಮುರಹರನ ದಾಸರನು

ರಾಗ – ಧನ್ಯಾಸಿ ತಾಳ – ಛಾಪುತಾಳ

ಮುಟ್ಟದಿರು ಮುಟ್ಟದಿರು ಮುರಹರನ ದಾಸರನು । ಪ ।
ಕಟ್ಟು ಮಾಡಿದ ಯಮನು ತನ್ನ ದೂತರಿಗೆ । ಅ.ಪ ।

ತಿರುಮಣಿ ತಿರುಚೂರ್ಣ ಶೃಂಗಾರ ಧರಿಸುವರ
ಸಿರಿತುಳಸಿ ವನಮಾಲೆಯಿಂದೊಪ್ಪುವವರ
ತಿರುಮಂತ್ರ ತೀರ್ಥಪ್ರಸಾದಕೊಳಗಾದವರ
ತಿರುಪತಿ ಯಾತ್ರೆಯನು ಮಾಡುವ ಮಹಾತ್ಮರ । ೧ ।

ಬಡವರಾಗಲಿ ಭಾಗ್ಯವಂತರಾಗಲಿ
ಕಡುಕರ್ಮಿ ಘೋರಪಾತಕರಾಗಲಿ ।
ನಡೆನುಡಿಗೆ ಮಾಧವನ ಬಿಡದೆ ಕೊಂಡಾಡುವರ
ಗೊಡವೆ ಬೇಡೆಂದು ಯಮಧರ್ಮ ಸಾರಿದನು । ೨ ।

ವಾಸುದೇವನ ವಾಸರವಾನಾಚರಿಸುವವರು
ಬೇಸರಿಸದೆ ಹರಿಪ್ರಸಂಗ ಮಾಳ್ಪವರ ।
ಸೇಷಶಯನ ಕಾಗಿನೆಲೆಯಾದಿ ಕೇಶವನ
ದಾಸಾನುದಾಸರಿಗೆ ದಾಸರಾದವರ । ೩ ।

## ಆರೂ ಸಮಯಕ್ಕೊದಗಲಿಲ್ಲ

ರಾಗ – ಮುಖಾರಿ ತಾಳ – ಝಂಪೆ

ಆರೂ ಸಮಯಕ್ಕೊದಗಲಿಲ್ಲ
ಮೋರೆ ನೋಡುತ ಸುಮ್ಮನಿಹರೆಲ್ಲ । ಪ ।

ಮಗಳು ಮಹಲಕುಮಿ ಮೊಮ್ಮಗನು ಸರಸಿಜಭವನು
ಖಗರಜವಾಹನನು ತನ್ನಳಿಯನು ।
ಅಗಜನಂದು ತನ್ನೊಡಲೊಳಿಂಬಿಟ್ಟು ಮೂ–
ರ್ಬೋಗಸೆ ಮಾಡಿದ ಮುನಿಯ ಬಿಡಿಸಲಿಲ್ಲ । ೧ ।
ಶ್ರೀದೇವಿ ಭೂದೇವಿ ಮಾತೆಯರು ತಾವಿರಲು
ಯಾದವರಾಯ ಮೋಹದ ತಂದೆಯು ।
ವೇದಮುಖದಣಾನಿಗೆ ಉರಿ ನಯನದಿಂದ ಸ್ಮರ
ಬೂದಿಯಾಗುವಾಗ ಬಿಡಿಸಲಿಲ್ಲವೇಕೆ । ೨ ।
ಪಿತನು ಸಾಗರನು ಹಿತದಾಕೆ ಶ್ರೀದೇವಿ
ಅತಿ ಬೀಗನಾದವ ನಾರಾಯಣ
ಜತೆ ಅಳಿಯರು ಬೊಮ್ಮ ಮನ್ಮಥರಿರಲಾಗಿ
ಕ್ಷಿತಿಯೊಳಗೆ ಶಶಿ ಕ್ಷೀಣವಾಗುವ ಸಮಯದಿ । ೩ ।
ತೆತ್ತೀಸಕೋಟಿ ದೇವರ್ಕಳು ತಾವಿರಲು
ಒತ್ತಿನಲಿ ಇಂದ್ರ ಉಪೇಂದ್ರರಿರಲು

ಮತ್ತೆ ಪಾರ್ವತಿ ಪುತ್ರ ಮಿರೇಶ ದಕ್ಷನ
ನೆತ್ತಿ ಹರಿಗಡಿದಾಗ ನೋಡುತಿಹರೆಲ್ಲ । ೪ ।
ಇಂತಿಂಥ ದೊಡ್ಡವರು ಈ ಪಾಡು ಪಡಲಾಗಿ
ಭ್ರಾಂತ ಮನುಜರಿಗೆ ಪೇಳಲಿನ್ನೆಷ್ಟು ।
ಕಂತುಪಿತ ಕಾಗಿನೆಲೆಯಾದಿ ಕೇಶವನ
ಸಂತೋಷದಿಂ ನೆನೆದು ಸುಖಿಯಾಗೊ ಮನುಜ । ೫ ।

## ಈತನೀಗ ವಾಸುದೇವನು ಲೋಕದೊಡೆಯ

ರಾಗ – ಭೈರವಿ ತಾಳ ರೂಪಕ

ಈತನೀಗ ವಾಸುದೇವನು ಲೋಕದೊಡೆಯ]
ಈತನೀಗ ವಾಸುದೇವನು । ಪ ।
ಈತನೀಗ ವಾಸುದೇವ ಈ ಸಮಸ್ತ ಲೋಕದೊಡೆಯ ।
ದಾಸಗೊಲಿದು ತೇರನೇರಿ ತೇಜಿ ಪಿಡಿದು ನಡೆಸಿದಾತ ।ಅ.ಪ ।
ದನುಜೆಯಾಳ್ದನಣ್ಣನಯ್ಯನ ಪಿತನ ಮುಂದೆ ಕೌರವೇಂದ್ರ
ನನುಜೆಯಾಳಿದವನ ಶಿರವ ಕತ್ತರಿಸುತ ತನ್ನ ।
ಅನುಜೆಯಾಳಿದವನ ಬೆಂಕಿ ಮುಟ್ಟದಂತೆ ಕಾಯ್ದ ರುಕ್ಮ
ನನುಜೆಯಾಳಿದವನ ಮೂರ್ತಿಯನು ನೋಡಿರೋ । ೧ ।
ನರನ ಸುತನರಣ್ಯದಲಿ ಗಿರಿಯೊಳ್ನಿಂತು ತನ್ನ ರೋಷದಿ
ಶರಗಳನ್ನು ತೀಡುತಿಪ್ಪನ ಯೋಚಿಸಿ ।
ಭರದಲವನ ಕರೆದು ಕುರುಹು ತೋರಿ ಪತ್ರವನು ಹಾರಿಸಿದವನ
ಶಿರವನು ಛೇದಿಸಿದ ದೇವ ಕಾಣಿರೋ । ೨ ।
ಸೃಷ್ಟಿಕರ್ತಗೆ ಮಗನಾದವನಿಗಿಷ್ಟ ಭೂಷಣ ಆಶನವಾದನ
ಜ್ಯೇಷ್ಟಪುತ್ರಗೆ ವೈರಿ ತೊಡೆಯ ಛೇದಿಸೆಂದು ಬೋಧಿಸಿ ।
ಕಷ್ಟವನು ಕಳೆದು ಭಕ್ತರಿಷ್ಟವನು ಕಾದ ಉ–
ತ್ಕೃಷ್ಟ ಮಹಿಮನಾದ ದೇವ ಕಾಣಿರೋ । ೩ ।
ಕ್ರೂರವಾದ ಫಣಿಪಬಾಣವನು ತರಣಿಜನೆಚ್ಚಾಗ
ಮೂರನರನತ್ತ ಬಪ್ಪುದನು ಈಕ್ಷಿಸಿ
ಧಾರಿಣಿಯ ಪದದೊಳೌಕಿ ಚರಣಭಜಕ
ನರನ ಕಾಯ್ದ ಭಾರಕರ್ತಾದ ದೇವನೀತ ಕಾಣಿರೋ । ೪ ।
ವ್ಯೋಮಕೇಶನಿಪ್ಪ ದೆಸೆಯ ಸರ್ವ ಜಗಕೆ ತೋರುತ

ಸಾಮಜವನೇರಿ ಬರುವ ಶಕ್ತಿಯನ್ನೀಕ್ಷಿಸಿ
ಪ್ರೇಮದಿಂದ ಉರವನೊಡ್ಡಿ ಡಿಂಗರಿಗನ ಕಾಯ್ದ ಸಾರ್ವ-
ಭೌಮ ಬಾಡದಾದಿ ಕೇಶವನ್ನ ನೋಡಿರಿ । ೫ ।

## ಭಜಿಸಿ ಬದುಕೆಲೊ ಮನುಜ

ರಾಗ ಕಾಂಬೋಧಿ ತಳಾ ಪ್ ಝಂಪೆ ತಾಳಾ

ಭಜಿಸಿ ಬದುಕೆಲೋ ಮನುಜ ಮನಮುಟ್ಟಿ ಶ್ರೀಹರಿಯ
ಅಜ ಸುರೇಂದ್ರಾದಿಗಳ ಆದಿ ವಂದಿತ ಪಾದ । ಪ ।
ಪಾಕಶಾಸನಗೊಲಿದು ಬಲಿಯ ಮೆಟ್ಟಿದ ಪಾದ
ಕಾಕು ಶಕಟನ ತುಳಿದು ಕೊಂದ ಪಾದ ।
ಲೋಕೇಶನಿಗೆ ಒಲಿದು ಪೂಜೆಗೊಂಬುವ ಪಾದ
ಲೋಕಪಾವನ ಗಂಗೆ ಜನಿಸಿದಾ ಪಾದ । ೧ ।
ಶಿಲೆಯ ಸತಿಯುಳನು ಸೌಂದರ್ಯಗೊಳಿಸಿದ ಪಾದ
ಒಲಿದು ಪಾರ್ಥಗೆ ಧರೆಯನೊತ್ತಿದ ಪಾದ ।
ಕೊಲಿಸಿ ಕಾಳಗದಿ ಕೌರವರ ಪಾದ
ಬಲಿದ ಕಾಳಿಂಗನನು ತುಳಿದ ಪಾದ । ೨ ।
ಗರುಡ ಶೇಷಾದಿಗಳು ಪೊತ್ತುಕೊಂಡಿಹ ಪಾದ
ಧರೆಯ ಈರಡಿಮಾಡಿ ಆಳಿದ ಪಾದ ।
ಸಿರಿ ತನ್ನ ತೊಡೆಯ ಮೇಲಿರಿಸಿ ಸೇವಿಸಿದ ಪಾದ
ವರಕಾಗಿನೆಲೆಯಾದಿ ಕೇಶವನ ಪಾದ । ೩ ।

## ಏನೆಂದು ಕೊಂಡಾಡಿ ಸ್ತುತಿಸುವೆನೋ

ರಾಗ : ಕಲ್ಯಾಣಿ ತಾಳ : ಝುಂಪೆ

ಏನೆಂದು ಕೊಂಡಾಡಿ ಸ್ತುತಿಸುವೆನೋ ದೇವ
ನಾನೇನು ಬಲ್ಲೆ ನಿಮ್ಮ ಮಹಿಮೆಗಳ ಮಾಧವ । ಪ ।
ಹರಿ ಮುಕುಂದನು ನೀನು ನರಜನ್ಮ ಹುಳು ನಾನು
ಪರಮಾತ್ಮ ನೀನು ಪಾಮರನು ನಾನು ।
ಗರುಡಗಮನನು ನೀನು ಮರುಳು ಪಾಪಿಯು ನಾನು

ಪರಮಜ್ಯೋತಿಯು ನೀನು ದುರುಳ ತಿರುಕನು ನಾನು । ೧ ।
ಅಣುರೇಣು ತೃಣಗಳಲ್ಲಿ ಪರಿಪೂರ್ಣನು ನೂನು
ಕ್ಷಣ ಕ್ಷಣಕೆ ಅವಗುಣಿಕ ಕುಕರ್ಮಿ ನಾನು ।
ವಾಣಿಯುರಸನ ಪೆತ್ತ ವೈಕುಂಠಪತಿ ನೀನು
ತನು ನಿತ್ಯವಲ್ಲದಾ ಗೊಂಬೆ ನಾನು । ೨ ।
ಕಂಬದಲಿ ಬಂದ ಆನಂದಮೂರುತಿ ನೀನು
ನಂಬಿಗೆಯು ಇಲ್ಲದ ಪ್ರಪಂಚಕನು ನಾನು ।
ಅಂಬರೀಷಗೆ ಒಲಿದ ಅಕ್ರೂರ ಸಖ ನೀನು
ಡಂಬಕರ್ಮಿಯು ನಾನು ನಿರ್ಜಿತನು ನೀನು । ೩ ।
ವಾರಿಧಿಶಯನನಾದ ಕಾರುಣ್ಯನಿಧಿ ನೀನು
ಘೋರದಿಂದಿಹ ಕಾಮಿ ಕ್ರೋಧಿ ನಾನು ।
ಈರೇಳು ಭುವನದೊಳು ಇರುವ ಮೂರುತಿ ನೀನು
ದೂರಿ ನಿನ್ನನು ಬಯ್ವ ದುಷ್ಟ ನಾನು । ೪ ।
ತಿರುಪತಿ ವಾಸ ಶ್ರೀವೇಂಕಟೇಶನೇ ನಿನ್ನ
ಚರಣಸೇವಕರ ಸೇವಕನು ನಾನು ।
ಬಿರುದುಳ್ಳವನು ನೀನು ಮೊರೆ ಹೊಕ್ಕನೈ ನಾನು
ಸಿರಿ ಕಾಗಿನೆಲೆಯಾದಿ ಕೇಶವನು ನೀನು । ೫ ।

## ಅಂಗಳದೊಳು ರಾಮನಾಡಿದ.

ರಾಗಾ : ಆಭೇರಿ ಆದಿ ತಾಳ

ಅಂಗಳದೊಳು ರಾಮನಾಡಿದ ಚಂದ್ರ ಬೇಕೆಂದು ತಾ ಹಠ ಮಾಡಿದಾ

ತಾಯಿಯು ಕರೆದು ಕೈ ಮಾಡಿ ತೋರಿದಾ ಮುಗಿಲ ಕಡೆಗೊಮ್ಮೆ ದಿಟ್ಟಿಸಿ ನೋಡಿದ
ಚಿಣಿಕೋಳು ಚಣ್ಣು ಬುಗುರಿ ಎಲ್ಲವ ಬೇಡ ಬೇಡ ಎನ್ದು ತಾ ಬಿಸಾಡಿದಾ । ೧ ।
ಕಂದ ಬಾ ಎಂದು ತಾಯಿ ಕರೆದಳು ಮಮ್ಮು ಉಣ್ಣೆಂದು ಬಣ್ಣಿಸುತ್ತಿದ್ದಳು
ತಾಯಿ ಕೌಸಲ್ಯ ಕಳವಳ ಗೊಂಡಲು ಕಂದ ಅಂಜಿದನು ಎನ್ನುತಿದ್ದಳು । ೨ ।
ಅಳುವ ಧ್ವನಿ ಕೇಳಿ ರಾಜನು ಮಂತ್ರಿ ಸಹಿತಾಗಿ ಧಾವಿಸಿ ಬಂದನು
ನಿಲುವ ಕನ್ನಡಿ ತಂದಿಡಿಸಿದಾ ಶ್ರೀ ರಾಮನ ಎತ್ತಿ ಮುದ್ದಾಡಿದಾ । ೩ ।
ಕನ್ನಡಿಯೊಳು ಬಿಂಬ ನೋಡಿದಾ ಚಂದ್ರ ಸಿಕ್ಕಿದನೆನ್ದು ಕುಣಿದಾಡಿದಾ
ಈ ಸಂಭ್ರಮ ನೋಡಿ ಆದಿ ಕೇಶವ ರಘು ವಂಶವನ್ನೇ ಕೊಂಡಾಡಿದಾ । ೪ ।